

# ಕೈಬರಹ ಚಳಕ



ಅಕ್ಷರಗಳನ್ನು ಸುಂದರವಾಗಿ ಬರೆಯುವುದೇ ಒಂದು ಕಲೆ. ಹಾಗಿದ್ದೂ ನಮ್ಮಲ್ಲಿ ಸಾಕಷ್ಟು ಜನರ ಅಕ್ಷರಗಳು ಕಾಗೆ ಕಾಲಿನಂತಿರುತ್ತವೆ. ಬಲಗೈಯಲ್ಲಿ ಸುಂದರವಾಗಿ ಬರೆಯುವುದೇ ಕಷ್ಟದ ಕೆಲಸ. ಅದರಲ್ಲೂ ಈಗಿನ ಕಂಪ್ಯೂಟರ್ ಯುಗದಲ್ಲಿ ಕೈಬರವಣಿಗೆ ಮರೆತೇ ಹೋದಂತಿದೆ.

ಇಲ್ಲೊಬ್ಬರಿದ್ದಾರೆ– ಚೀನಾದ ಜೋ ಮಿಂಗ್ ಡೀ. ಇವರು ಎರಡೂ ಕೈ, ಬಾಯಿ, ಮೂಗು, ಬೆನ್ನು– ಹೀಗೆ ದೇಹದ ವಿವಿಧ ಭಾಗಗಳಲ್ಲಿ ಬ್ರಷ್ ಅನ್ನು ಸಿಕ್ಕಿಸಿಕೊಂಡು ಮುದ್ದಾಗಿ ಚೈನೀಸ್ ಅಕ್ಷರಗಳನ್ನು ಬರೆಯಬಲ್ಲರು! 63 ವರ್ಷದ ಈ ಕ್ಯಾಲಿಗ್ರಾಫಿ ಮಾಸ್ಟರ್, ಏಕಕಾಲದಲ್ಲಿ 8 ಕ್ಯಾಲಿಗಾಫಿ ಬ್ರಷ್‌ಗಳನ್ನು ವಿವಿಧ ಭಾಗಗಳಲ್ಲಿ ಇರಿಸಿಕೊಂಡು, ಬೇರೆ ಬೇರೆ ಅಕ್ಷರಗಳನ್ನು ಸ್ಫುಟವಾಗಿ ಬರೆದು ತೋರಿಸಿ, ನೆರೆದವರಿಗೆಲ್ಲಾ ಬೆರಗನ್ನುಂಟು ಮಾಡಿದ್ದಾರೆ.

ಅಂದ ಹಾಗೆ ಈ ವಿದ್ಯೆಯನ್ನು ಸಾಧ್ಯವಾಗಿಸಲು ಜೋ ಮಿಂಗ್ ಡೀ ಅವರಿಗೆ ಹತ್ತು ವರ್ಷಗಳೇ ಬೇಕಾಯಿತಂತೆ.

■ ವಿದ್ಯಾ ಹಾಲಭಾವಿ